"ಚಪ್ಪಟೆ ಮೊಗದ ಆಸಾಮಿ. ಎಡಗಿವಿಯ ಬಳಿ ಒಂದು ಮಚ್ಚೆ... ಮುಖದ ಗುರುತು ಪೂರ್ಣವಾಗಿ ನೆನಪಿಲ್ಲ..."

"ತಮ್ಮಯ್ಯ ಚೀಲವನ್ನು ಒಯ್ಯಲು ಬರಲೇ ಇಲ್ವೆ?"

"ಇಲ್ಲ."

"ನೀವು ಆ ಬಗ್ಗೆ ಮೇದಪ್ಪನಲ್ಲಿ ವಿಚಾರಿಸಲಿಲ್ವೇ?"

"ವಿಚಾರಿಸಬೇಕು ಅಂತಿದ್ದೆ. ಆದ್ರೆ ಆ ನಂತ್ರ ನನ್ಗೆ ಅವ್ನು ಸಿಗಲೇ ಇಲ್ಲ! ನನ್ನಲ್ಲಿ ಆತನ ಮೊಬೈಲ್ ಸಂಖ್ಯೆನೂ ಇಲ್ಲ."

"ಓಹ್! ನೀವು ಆಮೇಲೆ ಆತನನ್ನು ಕಂಡಿದ್ದೇ ಇಲ್ಲ. ಆ ಚೀಲದಲ್ಲಿ ಏನಿತ್ತು ಅಂತ ನೋಡಿದ್ದೀರಾ?"

"ಅದರಲ್ಲಿ ಇದ್ದಿದ್ದು ಒಂದು ಪೇಪರ್ ವೆಯಿಟ್, ಹಳೆಯ ವಾರಪತ್ರಿಕೆಗಳು, ಹಳೆಯ ಪರ್ಸ್, ಒಂದು ಮುಚ್ಚಿದ್ದ ಕವರ್."

"ಅವೆಲ್ಲಾ ಎಲ್ಲಿವೆ?"

ಓಂಕಾರಯ್ಯ ಮೆಲ್ಲನೆ ಒಳ ನಡೆದು, ಕೆಲ ಕ್ಷಣಗಳಲ್ಲಿ ಒಂದು ಚೀಲದೊಂದಿಗೆ ಹೊರಬಂದ.

"ಇದೇ ಆ ಚೀಲ. ಇಲ್ನೋಡಿ, 'ಕೊಡಗು ವಾರ್ತೆ' ಪತ್ರಿಕೆಯ ಎರಡು ಸಂಚಿಕೆಗಳು. ಇದು ಖಾಲಿಯಾಗಿದ್ದ ಪರ್ಸ್, ಕೇವಲ ಚಿಲ್ಲರೆ ಹಣವಿತ್ತು ಅದರಲ್ಲಿ, ಇದು ಕವರ್..."

"ಪೇಪರ್ ವೆಯಿಟ್ ಎಲ್ಲಿ?"

"ಅದು ಕಾಣೆಯಾಗಿದೆ!..."

"ಕಾಣೆಯಾಗಿದೆ? ಯಾವಾಗ?"

"ಕಾಗದ ಬಂದ ಮರುದಿನ! ನಾನು ಅದನ್ನು ಹಜಾರದಲ್ಲಿ ಮೇಜಿನ ಮೇಲೆ ಇರಿಸಿದ್ದೆ."

ಅಷ್ಟರಲ್ಲಿ ದೇಚಮ್ಮ ಮಧ್ಯೆ ಬಾಯಿ ಹಾಕಿದಳು,

"ರೀ... ನನ್ಗೆ ಗೊತ್ತಾಯ್ತು... ಆ ದಿವ್ಸ ನೀವು ತೋಟದಲ್ಲಿ ಕೆಲ್ಸ ಮಾಡ್ತಿದ್ದಾಗ, ಯಾರೋ ಒಬ್ಬ ಬಂದಿದ್ದ ನಿಮ್ಮನ್ನು ವಿಚಾರಿಸಿಕೊಂಡು.... ನಾನು ಆತನನ್ನು ಕೂರಲು ಹೇಳಿ, ನಿಮ್ಮನ್ನು ಕರೆದು ವಾಪಸು ಬರುವಾಗ ಆತ ಇರಲೇ ಇಲ್ಲ... ಅವ್ನೇ ಅದನ್ನ ಒಯ್ದಿರಬಹುದೇ?"

"ನೀ ಸ್ವಲ್ಪ ಸುಮ್ನಿರು. ಅವ್ನ್ಯಾಕೆ ಅದನ್ನ ಎತ್ತಿಕೊಂಡು ಹೋಗ್ತಾನೆ?"

"ಹಿಂದಿನ ದಿನ ಸಂಜೆ ಮೇಜನ್ನು ಸ್ವಚ್ಛಗೊಳಿಸುವಾಗ ಅದನ್ನು ನೋಡಿದ್ದೆ. ಮರುದಿನ ಸಂಜೆ ಕಾಣಲಿಲ್ಲ. ಅದ್ಕೇ ಹೇಳ್ದೆ..."

"ಹಾಗಿದ್ರೆ ಅವ್ನೆಯೇ ಕುಪ್ಪಂಡ ವೇಣು?" ನನ್ನ ಅನುಮಾನ.

"ಸದ್ಯಕ್ಕೆ ಆ ಪ್ರಶ್ನೆಗೆ ಉತ್ತರ ಇಲ್ಲ. ಓಂಕಾರಯ್ಯ, ಆ ಪೇಪರ್ ವೆಯಿಟ್ ಹೇಗಿತ್ತು ಅಂತ ಹೇಳಬಲ್ಲಿರಾ?"

"ಅದೊಂದು ಸಾಮಾನ್ಯ ಪೇಪರ್ ವೆಯಿಟ್. ನನ್ನ ಮೊಬೈಲಲ್ಲಿ ಅದರ ಫೋಟೊ ಇದೆ."

ಓಂಕಾರಯ್ಯ ಚಿತ್ರವನ್ನು ನಮ್ಮೆದುರು ಹಿಡಿದ.

"ಇದು ನಕ್ಷತ್ರ ಜ್ಯುವೆಲ್ಲರಿಯವರು ಗ್ರಾಹಕರಿಗಾಗಿ ಮಾಡಿಸಿದ ಪೇಪರ್ ವೆಯಿಟ್. ಓಂಕಾರಯ್ಯ, ಆ ಪರ್ಸಿನಲ್ಲಿ ಹಣ ಎಷ್ಟಿತ್ತು?"

ಕರಮಚಂದನ ಪ್ರಶ್ನೆಗೆ ಓಂಕಾರಯ್ಯ ಬಿಳಿಚಿಕೊಂಡ. ನನಗೂ ಸೋಜಿಗ. ಅದು ಕರಮಚಂದನಿಗೆ ಹೇಗೆ ಗೊತ್ತಾಯಿತು?

"ಭರ್ತಿ ಹತ್ತು ಸಾವಿರ ರೂಪಾಯಿ! ಮೇದಪ್ಪನು ತಮ್ಮಯ್ಯನಿಗೆ ಅದನ್ನು ಕೊಡಲು ಹೇಳಿದ್ದ. ತಮ್ಮಯ್ಯ ಬಾರದಿದ್ದುದನ್ನು ಕಂಡು, ಅದನ್ನು ಖರ್ಚು ಮಾಡಿಬಿಟ್ಟೆ."